ಶ್ರೀ ಡಿ. ಮಂಜುನಾಥ್ :— ಈ ಬಗ್ಗೆ ಪ್ರಧಾನ ಸಂರಕ್ಷಣಾಧಿಕಾರಿಗಳಿಗೆ ಆದೇಶ ಕೊಡಲು ಹೇಳಿದ್ದೇನೆ.

ಡಾ : ಎಂ.ಪಿ. ಕರ್ಕಿ :— ಅವರು ಬೇಸಿಗೆ ಕಾಲದಲ್ಲಿ ಬೇರೆ ಕಡೆಗೆ ಹೋಗಬೇಕು, ಕೇಸ್ ಎಂದರೆ ಅವರು ಬರಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ :— ತಾವು ಕಾನ್ಸರ್ವೇಟರ್ ರವರನ್ನು ಭೇಟಿ ಮಾಡಿ ವಿಷಯ ಏನು ಎಂದು ತಿಳಿದುಕೊಂಡು, ಏನು ಮಾಡಬೇಕೆಂಬ ಬಗ್ಗೆ ಸಲಹೆಯನ್ನು ಕೊಡಿ ಎಂದು ಹೇಳಿದ್ದೇನೆ.

(ಖ) *ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರನ್ನು ಖಾಯಂ ಮಾಡುವುದು.*

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವಿವಿಧ ಶಾಖೆಯಲ್ಲಿ 10-12 ವರ್ಷಗಳಿಂದ ದಿನಗೂಲಿಯ ಮೇಲೆ 50 ಜನರು ಏನು ಸೇವೆ ಸಲ್ಲಿಸುತ್ತಿದ್ದರು ಅವರನ್ನು ಈಗ ಒಂದು ತಿಂಗಳಿನಿಂದ ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ಸದರಿ ಬ್ಯಾಂಕಿನಲ್ಲಿ 'ಡಿ' ಗುಂಪಿನ ನೌಕರರನ್ನಾಗಿ ನೇಮಕಾತಿ ಮಾಡಿಕೊಂಡು ಅವರಿಗೆ ಯಾವುದೇ ಆದ್ಯತೆಯನ್ನು ಕೊಟ್ಟಿಲ್ಲ. ಸರ್ಕಾರದ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಖಾಯಂ ಮಾಡುವಂತಹ ಪ್ರಕ್ರಿಯೆ ಇರುವಾಗ ಇಲ್ಲಿ 10-12 ವರ್ಷಗಳಿಂದಲೂ ಸೇವೆ ಮಾಡಿರುವಂತಹ 'ಡಿ' ಗುಂಪಿನ ನೌಕರರಿಗೆ ಕೆಲಸವನ್ನು ಖಾಯಂ ಮಾಡುವ ವಿಷಯವಾಗಿ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :— ಮಾನ್ಯ ಅಧ್ಯಕ್ಷರೆ, ದಿನಗೂಲಿ ನೌಕರರನ್ನಾಗಿ ತೆಗೆದುಕೊಂಡ ನೌಕರರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ. ಅವರನ್ನು ತಾತ್ಕಾಲಿಕವಾಗಿ ನಾಲ್ಕು ದಿವಸಗಳು ತೆಗೆದುಕೊಳ್ಳುವಂಥಾದ್ದು ಇದೆ, ಅವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು.ಬಿ. ಬಣಕಾರ್ :— ನಾನು ನಾಲ್ಕೈದು ದಿವಸಗಳು ಕೆಲಸ ಮಾಡಿರುವವರ ಬಗ್ಗೆ ಹೇಳುತ್ತಾ ಇಲ್ಲ. ನಾನು 10-12 ವರ್ಷಗಳಿಂದ ಸೇವೆ ಸಲ್ಲಿಸಿರುವವರ ಬಗ್ಗೆ ಹೇಳಿದ್ದೇನೆ.

1.10 ಪಿ.ಎಂ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ನಮ್ಮ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಈ ರೀತಿ ಎಷ್ಟು ನಿಯಮಗಳು ಇರುವುದಕ್ಕೆ ಹೇಗೆ ಸಾಧ್ಯ? ಸರ್ಕಾರ ಯಾವ ರೀತಿ ಖಾಯಂ ಮಾಡುತ್ತದೆ, ತಾವು ಕೂಡ ಅದೇ ರೀತಿ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೆ. ಅಂತಹವರನ್ನು ಖಾಯಂ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು :— ಮಾನ್ಯ ಆರಗ ಜ್ಞಾನೇಂದ್ರರವರೆ, ಮಾನ್ಯ ಆರೋಗ್ಯ ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ಹೋಗಿರುವುದರಿಂದ, ತಾವು ಅವರು ಇದ್ದಾಗ ಪ್ರಸ್ತಾಪ ಮಾಡುತ್ತೀರೇನು?

(ಎ) ತೀರ್ಥಹಳ್ಳಿ ಕ್ಷೇತ್ರದ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯ ಪ್ರಸೂತಿ ತಜ್ಞರನ್ನು ನೇಮಿಸುವುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯ ಮೂರ್ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯನ್ನು ಹೊಂದಿದೆ. ಇವತ್ತು ಅಲ್ಲಿ ಪ್ರಸೂತಿ ವಿಭಾಗವಿಲ್ಲವೆಂದು ವಿವಿಧ ಮಹಿಳಾ ಸಂಘಟನೆಗಳು ಧರಣಿಸತ್ಯಾಗ್ರಹ ಮಾಡಿದ್ದಾರೆ. ನರ್ಸಿಂಗ್ ಹೋಂಗೆ ಹೋಗಿ ಪ್ರಸೂತಿಯಾಗಿ ಅಲ್ಲಿ ಹಣ ಪಾವತಿ ಮಾಡುವುದಕ್ಕಾಗದೆ ಮಾಂಗಲ್ಯ ಸರವನ್ನು ಅಡವಿಟ್ಟಿದ್ದಾರೆ. ಇಂತಹ ಪರಿಸ್ಥಿತಿ ಅಲ್ಲಿರುವಾಗ, ಅಲ್ಲಿಗೆ ಒಬ್ಬ ಪ್ರಸೂತಿ ತಜ್ಞರನ್ನು ಎರಡು ವರ್ಷಗಳಿಂದ ಈ ಸರ್ಕಾರ ಅಲ್ಲಿಗೆ ಹಾಕುತ್ತಿಲ್ಲ. ಐದು ಜನರನ್ನು ಪೋಸ್ಟಿಂಗ್ ಮಾಡಿದರು, ಅದರಲ್ಲಿ ಒಬ್ಬ ನಾನು ಊರಿಗೆ ಹೋಗುವುದರೊಳಗಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ.

ಅಧ್ಯಕ್ಷರು :— ಮಹಿಳಾ ವೈದ್ಯರನ್ನು ಹಳ್ಳಿಯಲ್ಲಿರುವ ಆಸ್ಪತ್ರೆಗಳಿಗೆ ಪೋಸ್ಟಿಂಗ್ ಮಾಡಿದರೆ, ಅವರಿಗೆ ಅಲ್ಲಿ ಹೋಗಿ ಕರ್ತವ್ಯ ನಿರ್ವಹಿಸಿದರೆ ಅದೇನೊ ರೋಗ ಬರುತ್ತದೆಯಂತೆ, ಅದಕ್ಕೆ ಅವರು ಹೋಗುವುದಿಲ್ಲ; ಅವರು ಇಲ್ಲೇ ಸಾಯುತ್ತಿದ್ದಾರೆ. ನಾನು ಸಭಾಧ್ಯಕ್ಷನಾಗಿ ಹೇಳುತ್ತಿರುವ ಪದಗಳನ್ನು ಗಮನಿಸಿ, ಅವರು ಹಳ್ಳಿಗೆ ಹೋದರೆ ಅದೇನೊ ರೋಗ ಬಂದು ಸತ್ತು ಹೋಗುತ್ತಾರೆ, ಅದಕ್ಕೆ ಶಾಸಕರ ಭವನದ ಹತ್ತಿರ, ನಮ್ಮ ಮನೆಗಳ ಹತ್ತಿರ ಇಲ್ಲೇ ಅವರು ಸಾಯುತ್ತಾರೆ, ಪೋಸ್ಟಿಂಗ್ಸ್ ಮಾಡಿದರೂ ಅವರು ಹೋಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :— ಸರ್, ಅವರು ಸಾಯುವುದಕ್ಕೆ, ಇವರು ಸಹಾಯ ಮಾಡುತ್ತಿದ್ದಾರಲ್ಲ, ಇವರು ಜನರ ಪೋಸ್ಟಿಂಗ್ಸ್ ಆರ್ಡರ್ ಅನ್ನು ಬದಲಾಯಿಸುತ್ತಾರೆ; ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಈ ರೀತಿ ಆಗುತ್ತಿರುವುದಕ್ಕೆ ಇವರಿಗೆ ನಾಚಿಕೆಯಾಗಬೇಕು.

ಅಧ್ಯಕ್ಷರು :— ಈ ಜಿಲ್ಲಾಧಿಕಾರಿಗಳಿಗೆ ವೈದ್ಯರನ್ನು ಆಯ್ಕೆ ಮಾಡಿ ಅಲ್ಲಿ ನೇಮಕಾತಿ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಶಿವಮೊಗ್ಗದಲ್ಲಿರುಮವನನ್ನು ಹೊಸನಗರಕ್ಕೆ ಹೋಗು ಎಂದರೆ ಹೋಗುವುದಿಲ್ಲ. ನಾವು ಜಿಲ್ಲಾಮಟ್ಟದಲ್ಲೇ ಎಲ್‌ಎಂಪಿ ಪ್ರಾರಂಭ ಮಾಡಿ ಅಲ್ಲೇ ವೈದ್ಯರನ್ನು ಹೋಗುವುದಕ್ಕೆ ಹೇಳುವುದು ಉತ್ತಮ; ಸುಮ್ಮನೆ